

ದೀನದುರ್ಬಲರು ಹಾಗೂ ಎಳೆಯರೆಂದರೆ ಸ. ರಘುನಾಥ ಮೇಷ್ಟ್ರಿಗೆ ಇನ್ನಿಲ್ಲದ ಕಾಳಜಿ. (ಪ್ರಜಾವಾಣಿ ಸಂಗ್ರಹ)

ಈ ಸಾಮರಸ್ಯ ಸಾಧ್ಯವಾದದ್ದಾದರೂ ಹೇಗೆ?

ಇದಕ್ಕೆ ಒಂದು ದೊಡ್ಡ ಪರಂಪರೆ ಇದೆ. ಆ ಪರಂಪರೆಯನ್ನ ನಾವು ಸಹಜವಾಗಿ ಗುರುತಿಸೋದಾದರೆ ಎರಡನೇ ಪ್ರೌಢದೇವರಾಯನ ಕಾಲದ್ದು. ಯಾಕೆ ಅಂದ್ರೆ ಶ್ರೀನಾಥ ಇದ್ದದ್ದು ಅಲ್ಲಿ. 'ಯವರೇಮನ್ನನೇಮಿ ನಿಜಮು ನಾ ಕವಿತ್ವಪು ಭಾಷ ಕರ್ಣಾಟ ಭಾಷ' (ಯಾರೇನಂದರೇನು ನಿಜವು ನನ್ನ ಕವಿತ್ವದ ಭಾಷೆ ಕರ್ಣಾಟ ಭಾಷೆ) ಅಂತ. ಕೆಲವರು ಹೇಳಬಹುದು (ವಾದಾನು ಇದೆ ಬೇಕಾದಷ್ಟು) 'ಕರ್ಣಾಟ ಭಾಷೆ ಅಂದ್ರೆ ಕನ್ನಡ ಅಲ್ಲ, ಕಿವಿಗೆ ಇಂಪಾದ ಭಾಷೆ' ಅಂತ. ಮೊದಲು ಶ್ರೀನಾಥ ಹೇಳಿದ್ದು 'ದೇಶ ಭಾಷಲಂದು ತೆಲುಗು ಲೆಸ್ಸ' ಅಂತ. ಆಮೇಲೆ ಇದನ್ನೇ ಕೃಷ್ಣದೇವರಾಯ ಹೇಳಿದ್ದು ಅಂತ ಇದೆ. ತೆಲುಗು ಲೆಸ್ಸ ಅಂತ ಹೇಳಿದ ಮೇಲೆ 'ನಾ ಕವಿತ್ವಪು ಭಾಷ ಕರ್ಣಾಟ ಭಾಷ' ಅಂತ ಹೇಳ್ತಾನೆ. ಸ್ಪಷ್ಟವಾಗಿದೆ ನನ್ನ ಕವಿತೆಯ ಭಾಷೆ. ಇವೆರಡನ್ನೂ ನಾವು ಗಮನಿಸಬೇಕು. ದೇಶೀ ಭಾಷೆಗಳಲ್ಲಿ ತೆಲುಗು ತಿಳಿದು (ತಿಳಿಯಾದುದು) ಅಂತ ನಾ ಬಳಸ್ತೀನಿ. ಅವನು ಹೀಗೆ ಇನ್ನೂ ಹಲವು ಕಡೆ ಹೇಳ್ತಾನೆ. ಅದನ್ನ ಯಾರೂ ಗಮನಿಸಿ ಉತ್ತರ ಕೊಡ್ತಾ ಇಲ್ಲ. ನಾವು ಒಂದನ್ನ ಹಿಡ್ಕೊಂಡು ಉಯ್ಯಾಲೆ ಆಡ್ತಾ ಇದೀವಿ. ಅವನ ಕಾವ್ಯದ ನುಡಿ ಭಾಷೆ ತೆಲುಗು, ಹೃದಯ ಭಾಷೆ ಕನ್ನಡ. ಆದ್ದರಿಂದಲೇ ಅವನು ಹೇಳಿದ್ದು 'ಯಾರು ಏನೆಂದರೇನು, ನಿಜವು ನನ್ನ ಕಾವ್ಯ ಭಾಷೆ ಕರ್ಣಾಟ ಭಾಷೆ' ಅಂತ. ಯಾಕೆ ಅಂದ್ರೆ ಕವಿಸಾರ್ವಭೌಮ ಅಂತ ದೊಡ್ಡ ಮನ್ನಣೆ ಪಡೆದದ್ದು ಇಲ್ಲೇ ಕರ್ನಾಟಕದಲ್ಲಿ. ವಿಜಯನಗರದ ದ್ರಾಕ್ಷಿಬೆಳೆ (ದ್ರಾಕ್ಷಾರಾಮಂ ಅವನ ಕಾವ್ಯ) ಮತ್ತು ಭತ್ತದ ಬೆಳೆಗಳ ಬಗ್ಗೆ ಅವನು ತನ್ನ ಕಾವ್ಯದಲ್ಲಿ ಮಾತಾಡ್ತಾನೆ. ಹಾಗಾಗಿ ಅಲ್ಲಿಂದ ಪ್ರಾರಂಭವಾಗಿ ಕೃಷ್ಣದೇವರಾಯನ ಕಾಲಕ್ಕೆ ಬರೋದಾದರೆ ಅವನು ಸ್ವತಃ ಕನ್ನಡಾಭಿಮಾನಿ. ನೂರು ಜನ ನೂರು ಹೇಳಬಹುದು; ಅವನ ಕಾವ್ಯ ಓದಿದರೆ ಗೊತ್ತಾಗುತ್ತೆ. 'ಆಮುಕ್ತಮಾಲ್ಯ'ದೊಳಗೆ ಆವಾಗಲೇ ಆ ಕಾಲದಲ್ಲಿ ಬಳಕೆಯಲ್ಲಿದ್ದ ಅನೇಕ ಕನ್ನಡ ಶಬ್ದಗಳನ್ನು ಬಳಸ್ತಾನೆ. ಆಮೇಲೆ ಅನ್ನಮಯ್ಯ ತನ್ನ ಕೀರ್ತನೆಗಳಲ್ಲಿ ಕನ್ನಡ ಪದಗಳನ್ನು ಬಳಸ್ತಾನೆ. 'ಈಕೆ', 'ಆಕೆ' ಅನ್ನೋ ಪದಗಳನ್ನೂ ಸಹ ಬಳಸ್ತಾನೆ. ಅಂದರೆ ಕನ್ನಡದ ಪ್ರಭಾವ ಆ ಕಡೆಗೆ ಇತ್ತು. ಹಾಗಾಗಿ ಸೌಹಾರ್ದತೆ ಅನ್ನೋದು ಶತಮಾನಗಳಿಂದ (ಯುಗಗಳಿಂದ) ಬಂದಿದೆ. ಅಂದರೆ ಮೇಲುಕೀಳಿನ ತರತಮವಿಲ್ಲದೆ ಭಾವಿಸಿಕೊಂಡಂತಹ ಭಾಷೆ ಇದು.